ದಿನಾಂಕ 04/09/2015 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎನ್.ವಿ. ವಕೀಲರಿಂದ

ಪ್ರಥಮ ವರ್ತಮಾನ ವರದಿ ಹಾಜರುಪಡಿಸಿದ್ದು, ನಿಶಾನೆ ಪಿ-1 ಎಂದು, ದೂರಿನ ನಕಲು ಹಾಜರುಪಡಿಸಿದ್ದು, ನಿಶಾನೆ ಪಿ-2 ಎಂದು, ಸ್ಥಳ ಮಹಜರು ಹಾಜರುಪಡಿಸಿದ್ದು, ನಿಶಾನೆ ಪಿ-3 ಎಂದು, ಸ್ಥಳದ ಕಚ್ಚಾ ನಕ್ಷೆ ಹಾಜರುಪಡಿಸಿದ್ದು, ನಿಶಾನೆ ಪಿ-4 ಎಂದು, ಐಎಂವಿ ವರದಿ ಹಾಜರುಪಡಿಸಿದ್ದು, ನಿಶಾನೆ ಪಿ-5 ಎಂದು, ಗಾಯದ ಪ್ರಮಾಣ ಪತ್ರ ಹಾಜರುಪಡಿಸಿದ್ದು, ನಿಶಾನೆ ಪಿ-6 ಎಂದು, ಚಾರ್ಜ್ ಶೀಟ್ ಹಾಜರುಪಡಿಸಿದ್ದು, ನಿಶಾನೆ ಪಿ-7 ಎಂದು, 46 ಸಲಹಾ ಚೀಟಿಗಳು ಹಾಜರುಪಡಿಸಿದ್ದು, ಒಟ್ಟಾಗಿ ನಿಶಾನೆ ಪಿ-8 ಎಂದು, 47 ಮೆಡಿಕಲ್ ಬಿಲ್ಸ್ ಹಾಜರುಪಡಿಸಿದ್ದು, ನಿಶಾನೆ ಪಿ-9 ರಿಂದ 55 ಎಂದು, ಸಿಟಿ ಕ್ಯಾನ್ ರಿಪೋರ್ಟ್ ಹಾಜರುಪಡಿಸಿದ್ದು, ನಿಶಾನೆ ಪಿ-56 ಎಂದು, ಎರಡು ಡಿಸ್‌ಚಾರ್ಜ್ ಕಾರ್ಡ್ ಹಾಜರುಪಡಿಸಿದ್ದು, ನಿಶಾನೆ ಪಿ-57 ಮತ್ತು 58 ಎಂದು, ಫೋಟೋ ಹಾಜರುಪಡಿಸಿದ್ದು, ನಿಶಾನೆ ಪಿ-59 ಮತ್ತು ಒಂದು ಸಿಡಿ ಹಾಜರುಪಡಿಸಿದ್ದು, ನಿಶಾನೆ ಪಿ-59(ಎ) ಎಂದು, 4 ಫೋಟೋ ಮತ್ತು ಒಂದು ಸಿಡಿ ಹಾಜರುಪಡಿಸಿದ್ದು, ನಿಶಾನೆ ಪಿ-60 ರಿಂದ 63 ಎಂದು, ಸಿಡಿ ನಿಶಾನೆ ಪಿ-63(ಎ) ಎಂದು, ಫೋಟೋ ರಶೀತಿ ಹಾಜರುಪಡಿಸಿದ್ದು, ನಿಶಾನೆ ಪಿ-64 ಎಂದು, ನಮ್ಮ ತಂದೆ ಹೆಸರಿನಲ್ಲಿರುವ 3 ಆರ್‌ಟಿಸಿ ನಕಲುಗಳನ್ನು ಹಾಜರುಪಡಿಸಿದ್ದು, ನಿಶಾನೆ ಪಿ-65 ರಿಂದ 67 ಎಂದು ಗುರುತಿಸಲಾಯಿತು. ಆದ್ದರಿಂದ ಅರ್ಜಿಯಲ್ಲಿ ಕೇಳಿರುವಂತೆ ಆದೇಶ ಮಾಡಬೇಕಾಗಿ ಪ್ರಾರ್ಥನೆ.

ಪಾಟೀ ಸವಾಲುಃ ಶ್ರೀ ಹೆಚ್.ಆರ್.ಜೆ. ವಕೀಲರಿಂದ (2ನೇ ಎದುರುದಾರರ ಪರವಾಗಿ)

ಹಾಸನ-ಮೈಸೂರು ರಸ್ತೆಯಲ್ಲಿ ಸುಮಾರು 1 ವರ್ಷದ ಹಿಂದೆ ಈ ಅಪಘಾತವಾಗಿದೆ. ಆ ದಿನ ನಾನು ಮತ್ತು ಮೋಹನ್‌ಕುಮಾರ್ ಡಿಸ್ಕವರಿ ಬೈಕಿನಲ್ಲಿ ಮೈಸೂರು ಕಡೆಗೆ ಹೋಗುತ್ತಿದ್ದೇವು. ಬೈಕು ನಂ. ನನಗೆ ಗೊತ್ತು. ಸಂಕನಹಳ್ಳಿಯ ಹತ್ತಿರ ಅಪಘಾತವಾಯಿತು. ಈ ಅಪಘಾತವು ಮಧ್ಯಾಹ್ನ 2-45 ಗಂಟೆಗೆ ಆಯಿತು. ಕೆಎಸ್‌ಆರ್‌ಟಿಸಿ ಬಸ್ಸು ಮೈಸೂರು ಕಡೆಗೆ ಹೋಗುತ್ತಿತ್ತು. ಅಂಕನಹಳ್ಳಿ ಗೇಟಿನ ಹತ್ತಿರ ಬಸ್ಸು ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸಿಕೊಂಡು ನಂತರ ಮುಂದೆ ಹೋಗುತ್ತಿತ್ತು ಎಂದರೆ ಸುಳ್ಳು. ನಾವೇ ಬೈಕನ್ನು ಅತಿವೇಗವಾಗಿ